ಹೊರಗೆ ಹಾಕ್ರಿ. ಇಲ್ದಿದ್ರೆ ಆ ಸ್ಟುಪಿಡ್ ಪಾಂಡಾನ ಜೊತೆ ಆ ಬಡಪಾಯಿ ಹುಡುಗರೂ ನೆಲದೊಳಗೆ ಐಕ್ಯವಾಗಿ ಬಿಡ್ತಾರೆ. ಆಮೇಲೆ ನಾ ಹೇಳ್ಲಿಲ್ಲ ಅನ್ನಬೇಡ್ರಿ' ಎನ್ನುತ್ತ ಟೇಬಲ್ ಗುದ್ದಿದರು.

ಟೇಬಲ್ ನಡುಗಿತು!

ಗೋಡೆ ಕೂಡ ನಡುಗಿತು!

ಗೋಡೆ ಗಡಿಯಾರ ಕೆಳಗೆ ಬಿದ್ದು ಚೆಲ್ಲಾಪಿಲ್ಲಿಯಾಯಿತು!

ಕಿಡಕಿಗಳು ಅಲುಗಾಡಿ ಗ್ಲಾಸುಗಳು ಒಡೆದವು!

'ಹೋಯ್ತು' ಎನ್ನುತ್ತ ಶೇಖ್ ಅವರು ತಮ್ಮ ಹಣೆ ಜಜ್ಜಿಕೊಂಡರು.

'ಏನು ಹೋಯ್ತು? ಯಾರು ಹೋದರು?' ಸಿಂಗ್ ಕೇಳಿದರು.

'ಅಲ್ಲಿ ನೋಡಿ ಕಿಡಕಿಯಾಚೆ' – ತೋರಿಸಿದರು. ಕುರ್ಚಿಯಿಂದೆದ್ದು ನೋಡಿ, ನೋಡಲಾಗದೆ ಕುಸಿದು ಮತ್ತೆ ಕುರ್ಚಿಯಲ್ಲಿ ಕುಳಿತರು. ಬಯೋ ಜಿಯೋ ಲ್ಯಾಬ್ ಇರುವಲ್ಲಿ ಧೂಳು ಮೋಡ ಕಟ್ಟಿತ್ತು!

'ಈಗ ನಿಮ್ಮ ಆ ದರಿದ್ರ ಫಾರ್ಮುಗಳನ್ನು ತುಂಬಿ ಎರಡು ಡಜನ್ ಶವಪೆಟ್ಟಿಗೆಗಳಿಗೆ ಆರ್ಡರ್ ಮಾಡಿ.' ಸಿಟ್ಟಿನಿಂದ ಘರ್ಜಿಸಿದ ಡಾ.ಶೇಖ್ ಅಗ್ನಿಶಾಮಕ ದಳ ಮತ್ತು ಆಂಬುಲೆನ್ಸಗಳನ್ನು ಕರೆಯಲು ನಂಬರುಗಳನ್ನು ಒತ್ತತೊಡಗಿದರು.

'ಶ್ ಶ್ ಶ್..' ಶೇಖ್ ಅವರಿಗೆ ಏನೋ ಹೇಳಬೇಕೆಂದುಕೊಂಡರು ಸಿಂಗ್. ಆದರೆ ಮಾತು ಹೊರಡಲೇ ಇಲ್ಲ. ಅಷ್ಟೊತ್ತಿಗಾಗಲೇ ಶೇಖ್ ಹೊರಗೆ ಹೋಗಿಬಿಟ್ಟಿದ್ದರು.

***

ಅಗ್ನಿಶಾಮಕ ದಳ ಬಂತು. ಅವರಿಗೆ ಒಳಗೆ ಪ್ರವೇಶಿಸುವುದು ಸಾಧ್ಯವಾಗಲಿಲ್ಲ. ಸಂಪೂರ್ಣ ಕಟ್ಟಡ ನೆಲದೊಳಗೆ ಇಳಿದುಬಿಟ್ಟಿತ್ತು! ಕಟ್ಟಡದ ಟೆರೇಸ್ ನೆಲದ ಮಟ್ಟಕ್ಕೆ ಬಂದಿತ್ತು! ಒಳಗೆ ಸಿಕ್ಕೊಂಡವರ ಆಕ್ರಂದನ ಮುಗಿಲು ಮುಟ್ಟಿತ್ತು. ಜನ ಹೌಹಾರಿದರು. ಅಗ್ನಿಶಾಮಕ ದಳದವರು ಹಾರಿ ಸುತ್ತಿಗೆಗಳಿಂದ ಗೋಡೆ ಒಡೆದು ಒಳಗೆ ಹೋದರು.

ಮೊದಲು ಸಿಕ್ಕ ದೇಹವನ್ನು ಹೊರತಂದಾಗ ಮಧ್ಯಾಹ್ನ ಎರಡೂವರೆ! ಯಾರೆಂದು ಗುರುತಿಸಲಾಗದಷ್ಟು ಮುಖದ ಮೇಲೆ ಧೂಳು! ಬಟ್ಟೆ, ಕೈಕಾಲು ಧೂಳು ಧೂಳು, ರಾಡಿ! ಗಾರ್ಡನ್ ಪೈಪ್ ಹಿಡಿದು ನೀರು ಬಿಟ್ಟು ಮುಖಕ್ಕೆ ಚಿಮುಕಿಸಿದಾಗ ಆ ವಿದ್ಯಾರ್ಥಿ ಟಣಕ್ಕನೆ ಜಿಗಿದು ತಲೆ ಜಾಡಿಸಿ ದೀರ್ಘ ಉಸಿರುಬಿಟ್ಟ. ಒಂದೊಂದಾಗಿ ಇಪ್ಪತ್ನಾಲ್ಕು ದೇಹಗಳನ್ನು ಹೊರತರಲಾಯಿತು.

ಪುಣ್ಯಕ್ಕೆ ಅಂಥ ಗಂಭೀರ ಗಾಯಗಳೇನಾಗಿರಲಿಲ್ಲ. ಯಾವುದೇ ಒಂದು ಶಬ್ದ ಕೂಡ ಅವರ ಬಾಯಿಂದ ಬರಲಿಲ್ಲ. ಬಾಯಿ ಬಿಟ್ಟು ಸುತ್ತಲೂ ನೋಡುತ್ತಿದ್ದರು ಅಷ್ಟೆ. ವಿಪರೀತ ಹೆದರಿಕೊಂಡಿದ್ದರು. ಯಾರನ್ನೂ ಗುರುತು ಹಿಡಿಯಲಿಕ್ಕಾಗುತ್ತಿರಲಿಲ್ಲ. ಅಂಥದರಲ್ಲಿ ದೊಡ್ಡ ದೇಹವೊಂದು ಗರ್ಜಿಸಿತು – 'ಇದಕ್ಕೆಲ್ಲ ಕಾರಣ ಆದ ಆ ಪಾತಕಿ ಯಾರು ಗೊತ್ತು ನನಗೆ. ಹೇಗೆ ಅರೆಸ್ಟ್ ಮಾಡಿಸ್ತೀನಿ ನೋಡ್ತಾಯಿರಿ.'

ಹೌದು, ಗರ್ಜಿಸಿದವರು ಪ್ರೊ. ಪಾಂಡೆ.

'ಶಾಂತರಾಗಿರಿ ಪ್ರೊ.ಪಾಂಡೆ ಶಾಂತರಾಗಿರಿ. ಅದೆಲ್ಲಾ ಆಮೇಲೆ. ಭೂಪದರಗಳ ಸಂಘರ್ಷದಿಂದ ಹೀಗೆಲ್ಲಾ ಆಕಸ್ಮಿಕಗಳು ಆಗುತ್ತಿರುತ್ತವೆ. ಮೊದಲು ಈ ಬಡಪಾಯಿ ವಿದ್ಯಾರ್ಥಿಗಳು ಚೇತರಿಸಿಕೊಳ್ಳಲಿ' ಸಮಾಧಾನ ಮಾಡಿದರು ಡಾ.ಶೇಖ್.

'ಡಾ.ಶೇಖ್, ಮೊದಲು ನಾನು ನಿಮ್ಮಲ್ಲಿ ಕ್ಷಮೆ ಕೇಳುತ್ತೇನೆ. ದಯವಿಟ್ಟು ನನ್ನನ್ನು ಕ್ಷಮಿಸಿ. ನೀವು ಹೇಳಿದಾಗಲೇ ನಾವು ಹೊರಗೋಡಿ ಬಂದಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ' ಎಂದು ಪಶ್ಚಾತ್ತಾಪಪಟ್ಟು ನುಡಿದು, 'ನೋಡ್ತಾ ಇರಿ, ಇದಕ್ಕೆಲ್ಲಾ ಕಾರಣೀಕೃತ ಆ ಪಾತಕಿಯನ್ನು ನಾನು ಏನ್ಮಾಡ್ತೀನಿ ಅಂತ' ಎಂದು ಹಲ್ಲುಮಸೆದರು.

'ಪಾತಕಿಯೇ? ಯಾರು? ಇಂಥ ದುರ್ಘಟನೆ ನಡೆಯಲು ಕಾರಣ ಭೂಮಿಯ ಮೇಲ್ಪದರು'

'ನೋ ನೋ ನೋ ಡಾ.ಶೇಖ್, ನಿಮಗೆ ಗೊತ್ತಿಲ್ಲ. ನಾವಲ್ಲಿ ಕೆಳಗೆ ಏನು ನೋಡಿದ್ದೇವೆ ಅಂತ ನಿಮಗೆ ಗೊತ್ತಿಲ್ಲ. ದೆವ್ವ ನೋಡಿದ ಹಾಗೆ ನಾವೆಲ್ಲಾ ಹೆದರಿಕೊಂಡುಬಿಟ್ಟಿದ್ದೆವು.'

'ಅದೇನು ನೀವಲ್ಲಿ ನೋಡಿದ್ದು?'

'ಇಲ್ಲಿ ಎಲ್ಲರ ಸಮಕ್ಷಮ ಬೇಡ, ರಾತ್ರಿ ಡಿನ್ನರಿಗೆ ನಮ್ಮಲ್ಲೇ ಬಂದು ಬಿಡಿ, ಸವಿಸ್ತಾರವಾಗಿ ಹೇಳ್ತೇನೆ. ಮೊದಲು ನಾನೀಗ ಸ್ನಾನ ಮಾಡಿ ಬರ್ತೇನೆ.'

***

'ಸ್ವಲ್ಪ ಮುಂಚೆಯೇ ಬಂದಿದ್ದೇನೆ. ಹಸಿವಾಗಿದೆ ಅಂತಲ್ಲ, ವಿಷಯ ತಿಳಿದುಕೊಳ್ಳೋ ಆತುರ' – ಡಾ.ಶೇಖ್ ನುಡಿದರು.

ಬಾಗಿಲನ್ನು ಇನ್ನಷ್ಟು ತೆರೆದ ಪ್ರೊ.ಪಾಂಡೆ 'ಬನ್ನಿ, ಬನ್ನಿ ನಿಮ್ಮ ಆತುರ ನನಗೆ ಅರ್ಥವಾಗುತ್ತದೆ ಬನ್ನಿ' ಎಂದು ಸ್ವಾಗತಿಸಿದರು.

'ಹೇಳಿ ಏನು ಕಂಡಿರಿ ಅಲ್ಲಿ ಒಳಗೆ?'

'ಅಪಾಯದ ಬಗ್ಗೆ ಮುನ್ನೆಚ್ಚರಿಕೆ ಕೊಡಲು ನೀವು ಬಂದಾಗ ನಾವು ನಕ್ಕುಬಿಟ್ಟಿದ್ದೆವು. ಜಿಯೋ ಥೇರಿಯನ್ನು ಗಂಭೀರವಾಗಿ ತೆಗೆದುಕೊಂಡರೆ ಇಂಥ ಭ್ರಾಂತಿ ಆಗೋದು ಸಹಜ ಎಂದು ನಗೆಯಾಡಿದ್ದೆವು.'

'ಅದಾಯ್ತು, ಮುಂದೆ ಹೇಳಿ.'

'ಒಮ್ಮಿಂದೊಮ್ಮೆಲೆ ನೆಲ ಕುಸಿಯತೊಡಗಿತು. ಸ್ವಿಮಿಂಗ್ ಪೂಲ್ ದಲ್ಲಿ ಜಿಗಿದ ಅನುಭವ!'

'ಚೀರಾಡ ತೊಡಗಿದಿರಿ.'

'ಇಲ್ಲಿಲ್ಲ ಡಾ.ಶೇಖ್, ಮೊದಲೆರಡು ನಿಮಿಷ ಸುಮ್ಮನೆ ಇದ್ದುಬಿಟ್ಟೆವು. ಏನಾಯಿತೆಂದೇ ಗೊತ್ತಾಗಲಿಲ್ಲ. ಒಳಗೆಲ್ಲಾ ಕತ್ತಲು, ಕಗ್ಗತ್ತಲು. ಕರಂಟೇ ಇರಲಿಲ್ಲವಲ್ಲ? ಕಿಡಕಿಗಳು ಖುಲ್ಲಂ ಖುಲ್ಲಾ. ಗ್ಲಾಸುಗಳು ಒಡೆದು ಹೋಗಿದ್ದವು. ನಿಜ ಹೇಳಬೇಕೆಂದರೆ ನಾವು ಸತ್ತೇಹೋದೆವು ಅನ್ನಿಸಿತ್ತು'

'ನಂತರ?'

'ಕಿಡಕಿಗಳ ಮೂಲಕ ಮಣ್ಣು ರಾಡಿ ಸುರಿಯತೊಡಗಿತು. ರಾಡಿ ಮೊಣಕಾಲವರೆಗೆ ಬಂತು. ಹಾಗೇ ಕೆಳಗೆ ಜಾರುತ್ತಲೇ ಬೀಳುತ್ತಲೇ ಇದ್ದೆವು. ಅಂಥದರಲ್ಲಿ ಚೀತ್ಕಾರವೊಂದು ಕೇಳಿಸಿತು. ಹೆಣ್ಣಿನ ಧ್ವನಿ ಅದು! ಕಪ್ಪು ದೇಹದಾಕೃತಿ! ಆ ಹೆಣ್ಣು ಯಾರು ಅಂತ ಯಾರಿಗೂ ಗೊತ್ತಾಗಲಿಲ್ಲ. ಒಬ್ಬ ತನ್ನ ಮೊಬೈಲ್ ಹೊರತೆಗೆದು ಲೈಟ್ ಬಿಟ್ಟುನೋಡಿದ. ಅವನೂ ಚೀರತೊಡಗಿದ.'

'ಏನು ನೋಡಿ?'

'ಇಲಿಗಳನ್ನು.'

'ಇಲಿಗಳನ್ನೇ?'

'ಹೌದು ಇಲಿಗಳನ್ನೇ. ಎಷ್ಟು ದೊಡ್ಡವಿದ್ದವು ಎಂದಿರಿ, ಹಂದಿಗಿಂತ ದೊಡ್ಡವು! ಒಟ್ಟು ಆರು ಇದ್ದವು.'

'ಹಂದಿಗಿಂತ ದೊಡ್ಡವೇ?'

## ಅರಸಿ

ಬಿದ್ದೆ ನಾನವಳ ಹಿಂದೆ
ಕನಸುಗಳ ಕಲ್ಪನೆಗಳ
ಅರಸಿ ಅರಸಿ
ಅದಕೇ
ಈಗವಳು ನನ್ನ
ಅರಸಿ..!
***

## ಕೊಡಲಿ

ಹಸಿರು ಮಳೆ
ನೆರಳು ನಾನವನಿಗೆ
ಮತ್ತೇನು ಕೊಡಲಿ
ಅವನೇಕೆ ಇಟ್ಟ
ನನ್ನ ಬುಡಕ್ಕೆ
ಕೊಡಲಿ..?

★ ಆರ್.ಸುನೀಲ್ ತರೀಕೆರೆ



ಈಶ್ವರ